**ರಾಜ್ಯ ಒಕ್ಕಲಿಗರ ಸಂಘ**

**ವಿಶ್ವೇಶ್ವರಪುರ ವಿಜ್ಞಾನ ಕಾಲೇಜು( ಅನುದಾನಿತ), ಕೆ.ಆರ್.ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು.**

ಕ್ರ.ಸಂ. ಬೆಂಗಳೂರು,
ದಿನಾಂಕ:

**ಅಧಿಸೂಚನೆ**

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ–27(ಎ)ರನ್ವಯ ರಾಜ್ಯ ಒಕ್ಕಲಿಗರ ಸಂಘಕ್ಕೆ ಸರ್ಕಾರದಿಂದ ನೇಮಕಗೊಂಡಿರುವ ಆಡಳಿತಾಧಿಕಾರಿಯವರು ಸಂಘದ ಬೈಲಾದಲ್ಲಿನ ನಿಬಂಧನೆ 8 ರ ಉಪನಿಬಂಧನೆ (9) ರಡಿ ಪ್ರದತ್ತವಾದ ಅಧಿಕಾರದನ್ವಯ ರಚಿಸಲು ಉದ್ದೇಶಿಸಿರುವ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು(ಅನುದಾನಿತ). ಕೆ.ಆರ್.ರಸ್ತೆ, ಬೆಂಗಳೂರು (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2019ರ ಕರಡು ಪ್ರತಿಯನ್ನು ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಗಮನಕ್ಕೆ ಈ ಮೂಲಕ ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಚುರಪಡಿಸಲಾಗಿದ್ದು, **30 ದಿನಗಳ** ನಂತರ ಕರಡು ನಿಯಮಾವಳಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಈ ನಿಯಮಾವಳಿಗಳ ಒಂದು ಕರಡು ಪ್ರತಿ ಸಂಸ್ಥೆಯ ಮುಖ್ಯಸ್ಥರ ಕಛೇರಿಯಲ್ಲಿ ಲಭ್ಯವಿರುತ್ತದೆ.

ಕರಡು ನಿಯಮಾವಳಿಗಳನ್ನು ರಾಜ್ಯ ಒಕ್ಕಲಿಗರ ಸಂಘದ ಅಂತರ್ಜಾಲ **"rvsangha.org"** ಮತ್ತು ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಯ ಅಂತರ್ಜಾಲ **"vvpurasciencecollege.com"** ಮೂಲಕವೂ ಪಡೆಯಬಹುದಾಗಿದೆ.

ಈ ಕರಡು ನಿಯಮಾವಳಿಗಳನ್ನು ಪ್ರಕಟಿಸಲಾದ **30 ದಿನಗಳ** ಒಳಗಾಗಿ ಈ ನಿಯಮಾವಳಿ ಸಂಬಂಧ ಯಾರಿಂದಲಾದರೂ ಸ್ವೀಕೃತವಾಗುವ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಡಳಿತಾಧಿಕಾರಿಯವರು ಪರಿಗಣಿಸಲಿದ್ದಾರೆ.

ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಿನ್ಸಿಪಾಲ್, ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್.ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು ಇವರಿಗೆ ವಿಳಾಸಿಸಬಹುದಾಗಿದ್ದು, ಅವರು ಅವುಗಳನ್ನು ಪರಿಶೀಲಿಸಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮುಂದಿನ ಅವಶ್ಯ ಕ್ರಮಕ್ಕಾಗಿ ಕಳುಹಿಸುತ್ತಾರೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಹೆಚ್.ನರಸಿಂಹಮೂರ್ತಿ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.

VVSC